

23 ಆಗಸ್ಟ್ 2001
ಬೆಲೆ: ರೂ. 8
ಸುಧಾ
ಗಣೇಶ ಬಂದ.... ಮತ್ತೆ ಬಂದ!

ಮುಖಪುಟ

'ಅಂಕಲ್ ಅಂಕಲ್ ಕಾಣಿಕೆ ಕೊಡಿ. ಎಷ್ಟಾದ್ರೂ ಸರಿ. ಕೊಡಿ ಅಂಕಲ್....'. ರಸ್ತೆಯಲ್ಲಿ ನಡೆದು ಹೋಗುತ್ತಿದ್ದಾಗಲೇ ಮುತ್ತಿಕೊಂಡ ನಾಲ್ಕಾರು ಹುಡುಗರು ಕಾಣಿಕೆ ಡಬ್ಬಿ ಮುಂದೆ ಮಾಡಿದಾಗ "ಎಷ್ಟು ಕಾಣಿಕೆ?" ಎಂದು ಪ್ರಶ್ನಿಸಿದೆ.

"ಇಲ್ಲೇ ಓಣಿಯಲ್ಲಿ ಗಣೇಶನ್ನ ಇಡ್ತೀವಿ ಅಂಕಲ್. ದಯವಿಟ್ಟು ಇಲ್ಲಾ ಅನ್ಬೇಡಿ ಅಂಕಲ್. ಎಷ್ಟಾದ್ರೂ ಸರಿ. ಕೊಡಿ ಅಂಕಲ್" ಎಂಬ ಉತ್ತರ ಬಂದಾಗ ಕಿಸೆಯಿಂದ ಒಂದಷ್ಟು ಕಾಸು ತೆಗೆದು ಡಬ್ಬಿಗೆ ಹಾಕಿ ಮುಂದಕ್ಕೆ ಸಾಗಿದೆ.

[illegible]



# ಗಣೇಶ ಬಂದ... ಮತ್ತೆ ಬಂದ!

**ಗಣೇಶ ಉತ್ಸವದ ಸಂಭ್ರಮೋತ್ಸಾಹಗಳಿಗೆ ಎಲ್ಲೆಡೆ ವೇದಿಕೆ ಸಿದ್ಧವಾಗಿದೆ. ಹಾದಿ-ಬೀದಿಗಳು ರಂಗೇರುತ್ತಿವೆ. ಬಗೆ ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅಮಿತೋತ್ಸಾಹದಲ್ಲಿ ಪಡ್ಡೆ ಹುಡುಗರು ರಶೀದಿ ಪುಸ್ತಕಗಳನ್ನು ಹಿಡಿದು ಬಾಗಿಲು ಬಡಿಯುತ್ತಿದ್ದಾರೆ... ಉದ್ಘೋಷಗಳು ಮೊಳಗುತ್ತಿವೆ...**

**ನೆತ್ರಕೆರೆ ಉದಯಶಂಕರ್**

[illegible]



[illegible]

ಸ್ವಾತಂತ್ರ್ಯ ಹೋರಾಟಗಾರ ಬಾಲಗಂಗಾಧರ ತಿಲಕರು ಎಂದರೆ ತಪ್ಪಲ್ಲ. ಸ್ವಾತಂತ್ರ್ಯ ನನ್ನ ಜನ್ಮಸಿದ್ಧ ಹಕ್ಕು ಎಂದು ಸಾರಿದ ತಿಲಕರಿಗೆ ಸ್ವಾತಂತ್ರ್ಯ ಹೋರಾಟಕ್ಕೆ ಜನರನ್ನು ವ್ಯಾಪಕವಾಗಿ ಜಾಗೃತಗೊಳಿಸುವುದು ಹೇಗೆ ಎಂಬ ಪ್ರಶ್ನೆ ಉದ್ಭವವಾದಾಗ ನೆರವಿಗೆ ಬಂದವನು ಗಣೇಶ.

ಮನೆ ಮನೆಗಳಲ್ಲಿ ಪೂಜೆಗೊಳ್ಳುವ ಗಣೇಶನನ್ನು ಸಾರ್ವಜನಿಕವಾಗಿ ಬೀದಿಗೆ ತಂದರೆ ಜನರ ಸಂಘಟನೆ ಸುಲಭ ಎಂಬುದನ್ನು ಅರ್ಥ ಮಾಡಿಕೊಂಡ ತಿಲಕರು 'ಸಾರ್ವಜನಿಕ ಗಣೇಶ ಉತ್ಸವ'ಗಳನ್ನು ಸಂಘಟಿಸುವ ಮೂಲಕ 'ಗಣೇಶನನ್ನು ಗುಡಿಯಿಂದ ಬೀದಿಗೆ ತಂದರು' ಎಂದು ನೆನಪು ಮಾಡುತ್ತಾರೆ ಹುಬ್ಬಳ್ಳಿಯ ಹಿರಿಯ ಗಾಂಧಿವಾದಿ ಕೃ.ಪ. ಜೋಶಿ. ಮಹಾರಾಷ್ಟ್ರದ ಪುಣೆ, ಮುಂಬೈಗಳಲ್ಲಿ ಹೀಗೆ ಆರಂಭವಾದ ಸಾರ್ವಜನಿಕ ಗಣೇಶ ಉತ್ಸವಗಳು ಸಹಜವಾಗಿಯೇ ನೆರೆ ರಾಜ್ಯವಾದ ಕರ್ನಾಟಕದ ಮೇಲೂ ಪ್ರಭಾವ ಬೀರಿದವು. ಇಲ್ಲೂ ಗಣಪ ಬೀದಿಗೆ ಬಂದ. ಇಲ್ಲೂ ಸಾರ್ವಜನಿಕ ಗಣೇಶ ಉತ್ಸವಗಳು ಆರಂಭವಾದವು ಎನ್ನುತ್ತಾರೆ ಅವರು.

ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಮುಂಬೈ ಕರ್ನಾಟಕದ ವ್ಯಾಪ್ತಿಯಲ್ಲಿದ್ದ ಬೆಳಗಾವಿ, ಹುಬ್ಬಳ್ಳಿ, ಧಾರವಾಡ, ವಿಜಾಪುರ, ಗೋಕಾಕ ಮುಂತಾದ ಕಡೆ ಸಾರ್ವಜನಿಕ ಗಣೇಶ ಉತ್ಸವ ಹೆಚ್ಚು



ತೊಟ್ಟಿಲಲ್ಲಿ ಗಣೇಶ...

ಜನಪ್ರಿಯವಾದರೆ, ದಕ್ಷಿಣ ಕರ್ನಾಟಕದಲ್ಲಿ ಬೆಂಗಳೂರು, ಮೈಸೂರು, ಮಂಗಳೂರು, ದಾವಣಗೆರೆ, ಚಿಕ್ಕಮಗಳೂರು ಮುಂತಾದ ಪ್ರದೇಶಗಳಲ್ಲೂ ಸಾರ್ವಜನಿಕ ಗಣೇಶ ಉತ್ಸವದ 'ಮಾಂತ್ರಿಕ ಆಕರ್ಷಣೆಯಿಂದ' ಹೊರಗುಳಿದಿಲ್ಲ.

**ಸಾಂಸ್ಕೃತಿಕ ಕಾರ್ಯಕ್ರಮ:** ಗಣೇಶನನ್ನು ಬೀದಿಯಲ್ಲಿ ಮಂಟಪ ಕಟ್ಟಿ ಕೂರಿಸಿಬಿಟ್ಟರೆ ಆಗುತ್ತದೆಯೇ? ಇಲ್ಲ. ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಜನರನ್ನು ಆಕರ್ಷಿಸಬೇಕು ಎಂಬ ಯೋಚನೆ ಬಂದದ್ದೇ ತಡ ಆರಂಭವಾದವು ಸಾಂಸ್ಕೃತಿಕ ಕಾರ್ಯಕ್ರಮಗಳು. ಸಾರ್ವಜನಿಕ ಗಣೇಶ ಉತ್ಸವದ ಸಂದರ್ಭದಲ್ಲಿ ಹಾಡುಗಾರರು, ವಾದ್ಯಗಾರರು, ನೃತ್ಯಕಲಾವಿದರು, ಯಕ್ಷಗಾನ ಪಟುಗಳು ತಮ್ಮ ಪ್ರತಿಭಾ ಪ್ರದರ್ಶನಕ್ಕೆ ಸಜ್ಜಾದರು.

ಬೆಂಗಳೂರಿನ ಹಾಲಣ್ಣ ಕೆ.ರ. 'ಅವು ಎರಡು ಕಾರ್ಯಕ್ರಮ ರಾಷ್ಟ್ರದ ಪ್ರಖ್ಯಾತ ಕಲಾವಿದರೆಲ್ಲ ಗಣಪನ ಮಂಟಪಗಳಿಗೆ ಬಂದು ಕಾರ್ಯಕ್ರಮ ನೀಡುತ್ತಿದ್ದರು. ಯೇಸುದಾಸ್, ಬಾಲಮುರಳಿ ಕೃಷ್ಣ, ಎಂ.ಎಸ್. ಸುಬ್ಬುಲಕ್ಷ್ಮಿ, ಎಂ.ಎಲ್. ವಸಂತಕುಮಾರಿ, ಮಧುರೈ ಮಣಿ ಅಯ್ಯರ್, ಚೊಕ್ಕಮ್ಮ, ಮಧುರೈ ಸೋಮಸುಂದರಂ ಮುಂತಾದವರ ಸಂಗೀತ ಕಚೇರಿ, ಹಾಡುಗಾರಿಕೆ ರೋಮ ನಿಮಿರಿಸುತ್ತಿದ್ದವು.'

ಚಿಟ್ಟಿಬಾಬು, ದೊರೆಸ್ವಾಮಿ ಅಯ್ಯಂಗಾರ್, ಆರ್. ಕೇಶವ ಮೂರ್ತಿ ಕುಟುಂಬದ ಆರ್.ಕೆ. ಸೂರ್ಯನಾರಾಯಣ, ಆರ್.ಕೆ. ಪ್ರಕಾಶ.

## ಹೀಗೊಬ್ಬ ಸುಲ್ತಾನ್ ಮತ್ತು 'ಚಾಂದಿನಿ'

ಗಣೇಶನ ರೂಪವೈವಿಧ್ಯಗಳು ಲೆಕ್ಕವಿಲ್ಲದಷ್ಟು! ಅಂತೆಯೇ ಈ ವಿಘ್ನನಿವಾರಕನ ಖ್ಯಾತಿ ದೇಶ-ವಿದೇಶಗಳಿಗೂ ವ್ಯಾಪಿಸಿದೆ. ಮತ-ಧರ್ಮಗಳನ್ನು ಮೀರಿ ಎಲ್ಲರಿಂದಲೂ ಪೂಜಿಸಲ್ಪಡುವ ವಿನಾಯಕ ಒಂದು ರೀತಿ ಭಾವೈಕ್ಯದ ಸಂಕೇತ.

ಇದಕ್ಕೊಂದು ಸಣ್ಣ ಉದಾಹರಣೆ: ಸುಲ್ತಾನ್ ಧಾರಿಯಾನಿ. ಬೆಂಗಳೂರಿನ ಎಂ.ಜಿ. ರಸ್ತೆಯ ಯುಟಿಲಿಟಿ ಕಟ್ಟಡದಲ್ಲಿ ಒಂದು ಅಂಗಡಿ ಇಟ್ಟಿರುವ ಈ ಮುಸ್ಲಿಂ ಬಂಧುವಿಗೆ ಗಣೇಶನೆಂದರೆ ಬಲು ಇಷ್ಟ.

ಇವರ ಅಂಗಡಿಯೊಳಗೆ ಕಾಲಿಟ್ಟರೆ ನೂರಾರು ಬಗೆಯ ಗಣೇಶನ ವಿಗ್ರಹಗಳು ನಿಮ್ಮನ್ನು ಬರಮಾಡಿಕೊಳ್ಳುತ್ತವೆ. ಗ್ರಾಹಕರು ಬಯಸುವ ಎಲ್ಲ ನಮೂನೆಯ ಕಲಾಕೃತಿಗಳೂ ಇಲ್ಲಿ ಸಿಗುತ್ತವೆ. ಬೆಳ್ಳಿ, ಹಿತ್ತಾಳೆ, ಕಂಚು, ತಾಮ್ರ, ಗಂಧ-ಬೀಟೆ- ತೇಗದಂಥ ವಿವಿಧ ಬಗೆಯ ಮರ, ಪ್ಲಾಸ್ಟರ್ ಆಫ್ ಪ್ಯಾರಿಸ್, ಟೆರ್ರಕೋಟ, ಕೊಂಬು, ಮುತ್ತು... ಹೀಗೆ ಬಗೆಬಗೆಯ ವಸ್ತುಗಳಿಂದ ರೂಪು ತಳೆದ ಕಲಾಕೃತಿಗಳ ಭಂಡಾರವೇ ಇಲ್ಲಿದೆ

ಹಿಂದೆ ಮುಂಬೈಯಲ್ಲಿದ್ದ ಸುಲ್ತಾನ್ ಮೂವತ್ತು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದು ಈ ಅಂಗಡಿ ಪ್ರಾರಂಭಿಸಿದರು. ಆಗ 'ಚಾಂದಿನಿ' ಎಂಬ



ಬಗೆಬಗೆಯ ಗಣೇಶ ವಿಗ್ರಹಗಳೊಂದಿಗೆ ಸುಲ್ತಾನ್ ಧಾರಿಯಾನಿ

ಸಿನಿಮಾ ಜನಪ್ರಿಯವಾಗಿದ್ದರಿಂದ ಅದೇ ಹೆಸರನ್ನು ಅಂಗಡಿಗೆ ಇಟ್ಟರು. ಅವರ ಅಂಗಡಿ ಮೊದಲು ಮೂರು ವರ್ಷ ನಷ್ಟದಲ್ಲೇ ನಡೆಯಿತು. ಬಳಿಕ ಒಮ್ಮೆ ದ್ವಾರಕಾನಾಥ ಎಂಬ ಶಿಲ್ಪಿ ಸುಂದರವಾದ ಗಣೇಶನ ವಿಗ್ರಹವೊಂದನ್ನು ತಂದು ಇಲ್ಲಿ ಮಾರಾಟಕ್ಕೆಂದು ಕೊಟ್ಟ. ಅದೃಷ್ಟವೋ ಅನುಗ್ರಹವೋ ಅದು ಮಾರನೇ ದಿನವೇ ಮಾರಾಟವಾಯಿತು. ನಂತರ ಅವರ ವ್ಯಾಪಾರ ವೃದ್ಧಿಯಾಗುತ್ತಲೇ ಹೋಯಿತು. ಅಂತೆಯೇ ಸುಲ್ತಾನ್ ಅಂಗಡಿಯಲ್ಲಿ ಗಣೇಶನ ವಿವಿಧ ನಮೂನೆಯ ವಿಗ್ರಹಗಳೂ ತುಂಬಿಕೊಳ್ಳುತ್ತಲೇ ಹೋದವು...

-ಗೋವರ್ಧನ ಅಂಕೋಲೆಕರ

ಆರ್.ಕೆ. ಶ್ರೀನಿವಾಸ ಮೂರ್ತಿ ಮುಂತಾದವರ ವೀಣೆ. ಮಂಜುನಾಥರಂತಹವರ ಘಟಂ. ಕದ್ರಿ ಗೋಪಾಲನಾಥರಂತಹವರ ಸ್ಯಾಕ್ಸೋಫೋನ್. ಎಸ್. ರಮಣಿ, ಬಿ.ಎಸ್. ಸುರೇಶ್. 'ಚಿಕ್ಕಿಲ್ ಸಿಸ್ಟರ್ಸ್' ಎಂದೇ ಹೆಸರಾದ ಲೀಲಾ-ಕುಂಜುಮಣಿ, 'ಬಾಂಬೆ ಸಿಸ್ಟರ್ಸ್' ಎಂದೇ ಹೆಸರಾದ ಸಿ. ಸರೋಜಾ- ಸಿ. ಲಲಿತಾ ಮತ್ತಿತರರ ಕೊಳಲು ವಾದನ ಎಂದೂ ಮರೆಯಲಾಗದಂತಹದ್ದು.

ಮಂಗಳೂರು, ಉಡುಪಿಯಂತಹ ಕಡಲ ತೀರದ ಕಡೆಗೆ ಹೋದರೆ ಯಕ್ಷಗಾನದ ಚೆಂಡೆ ಸದ್ದೂ ಭರತನಾಟ್ಯದ ಗೆಜ್ಜೆ, ಸಂಗೀತ ಕಚೇರಿ, ಸ್ಯಾಕ್ಸೋಫೋನ್, ನಾದಸ್ವರ, ಕೊಳಲ ದನಿಗಳ ಇಂಪಿನ ಜೊತೆ ಸೇರಿ ಉತ್ಸವಕ್ಕೆ ಇನ್ನಷ್ಟು ಬಣ್ಣ ತುಂಬುತ್ತಿದ್ದವು.

**ಹರಿಕಥಾ ಉತ್ಸವ:** ಗಣೇಶ ಉತ್ಸವಗಳನ್ನು ಇನ್ನೂ ರೋಚಕಗೊಳಿಸುತ್ತಿದ್ದುದು 'ಹರಿಕಥೆಗಳು'. ವೆಂಕೋಬರಾವ್, ವೇಣುಗೋಪಾಲದಾಸ್, ಭದ್ರಗಿರಿ ಕೇಶವದಾಸ್, ಭದ್ರಗಿರಿ ಅಚ್ಯುತದಾಸ್, ಗುರುರಾಜ ದಾಸ್, ಕನಕದಾಸ, ಗುರುರಾಜುಲು ನಾಯ್ಡು ಮತ್ತಿತರರ ರಸವತ್ತಾದ ಹರಿಕಥೆಗಳು ಗಣೇಶ ಉತ್ಸವಗಳೆಂದರೆ 'ಹರಿಕಥಾ ಉತ್ಸವಗಳು' ಎಂಬ ಭಾವನೆ ಬರುವಂತೆ ಮಾಡುತ್ತಿದ್ದವು.

'ಆ ಹರಿಕಥೆಗಳನ್ನು ಕೇಳುವುದೆಂದರೆ ಬಲು ಮಜಾ. ಇಡೀ ರಾತ್ರಿ ಹರಿಕಥೆ ಮಾಡುತ್ತಿದ್ದ ಗುರುರಾಜುಲು ನಾಯ್ಡು ಅವರ ಹರಿಕಥೆಯನ್ನಂತೂ ಮರೆಯಲು ಸಾಧ್ಯವೇ ಇಲ್ಲ' ಎನ್ನುತ್ತಾರೆ ಹರಿಕಥಾ ಅಭಿಮಾನಿ ಶೇಷಗಿರಿ ಶರ್ಮ.

'ನಿಜ. ಅಪ್ಪಾ ಅವರ ಕಾಲದಲ್ಲಿ ಗಣೇಶ ಉತ್ಸವಗಳು ಅಂದರೆ ಹರಿಕಥಾ ಉತ್ಸವಗಳು ಎಂಬ ಭಾವನೆ ಬರುತ್ತಿತ್ತು. ಜನ ತದೇಕಚಿತ್ತರಾಗಿ ಪ್ರೀತಿಯಿಂದ ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಹರಿದಾಸರು ಬರುವ ಮುನ್ನವೇ ಬಂದು ಗಂಟೆಗಟ್ಟಲೆ ಕಾದು ಹರಿಕಥೆ ಆಸ್ವಾದಿಸುತ್ತಿದ್ದರು. ಈಗ ಪರಿಸ್ಥಿತಿ ಹಾಗಿಲ್ಲ. ಜನರಿಗೆ ಹರಿಕಥೆ ಬಗ್ಗೆ ಆಸಕ್ತಿ ಇಲ್ಲವೆಂದಲ್ಲ. ಬಹುಶಃ ನಾವೇ ಹೊಸ ಕಥೆಗಳನ್ನು ಹೇಳಬೇಕೆಂಬ ಆಸೆ ಇರಬಹುದೇನೋ' ಎನ್ನುತ್ತಾರೆ ಈಗಲೂ ಅಪ್ಪ ಹೋಗುತ್ತಿದ್ದ ಕಡೆಯಲ್ಲೆಲ್ಲ ಹರಿಕಥೆ ನಡೆಸುತ್ತಾ ಹರಿಕಥಾ ಪರಂಪರೆಯ ಮುಂದುವರೆಸುತ್ತಿರುವ ಗುರುರಾಜುಲು ನಾಯ್ಡು ಅವರ ಪುತ್ರಿ ಶೋಭಾ ನಾಯ್ಡು.

**ಫ್ಯಾಷನ್ ಯುಗ:** ಈಗ ಸಾರ್ವಜನಿಕ ಗಣೇಶ ಉತ್ಸವಗಳ ಸಂಖ್ಯೆ ಹೆಚ್ಚಿದೆ. ಆದರೆ 'ಸಾಂಸ್ಕೃ ವೈಭವ' ನಶಿಸುತ್ತಿದೆಯೇನೋ ಎಂಬ ಮೂಡುತ್ತಿರುವುದು ನಿಜ ಎಂಬ ಮಾತಿಗೆ ಗಾಯಕಿ ಮಂಜುಳಾ ಗುರುರಾಜ್ ಅವರ ಸಹಮತವಿದೆ. 'ಈಗ ಫ್ಯಾಷನ್ ಯುಗ. ಗಣೇಶ ಉತ್ಸವವನ್ನು ಫ್ಯಾಷನ್ ಉತ್ಸ ವಾಗಿಯೇ ಆಚರಿಸುತ್ತಿದ್ದಾರೆ. ಈಗ ಸಂ ಕಚೇರಿಗಳ ಸ್ಥಾನದಲ್ಲಿ 'ಆರ್ಕೆಸ್ಟ್ರಾ'ಗಳನ್ನು ಬಯಸುತ್ತಿದ್ದಾರೆ. ಹಿಂದಿದ್ದ 'ನಾದೋಪಾಸ ಈಗಿಲ್ಲ' ಎನ್ನುತ್ತಾರೆ ಮಂಜುಳಾ ಗುರುರಾಜ್.

ಗಣೇಶೋತ್ಸವ ಕಾಲದಲ್ಲಿ ತಮ್ಮ ನಾಟಕ ಮೂಲಕ ಜನರ ಹೃದಯ ತಟ್ಟುತ್ತಿದ್ದ 'ಮಾಸ್ಟರ್ ಹಿರಣ್ಣಯ್ಯ ಮಿತ್ರ ಮಂಡಳಿ'ಗೆ ಮಾತ್ರ ಇಂತ ಅನುಭವ ಆಗಿಲ್ಲ. ಮಾಸ್ಟರ್ ಹಿರಣ್ಣಯ್ಯ ಅ ಪುತ್ರ ಹಿರಣ್ಣಯ್ಯ ಪ್ರಕಾರ ಮಿತ್ರ ಮಂಡಳಿ ನಾಟಕಗಳಿಗೆ ಹಿಂದೆ ಲಭಿಸುತ್ತಿದ್ದ ಪ್ರೋತ್ಸಾ ಈಗಲೂ ಲಭಿಸುತ್ತಿದೆ.

ಗಣೇಶ ಉತ್ಸವ ಸಂದರ್ಭದಲ್ಲಿ ಬೆಂಗಳೂ ಹನುಮಂತ ನಗರದ ರಾಮಾಂಜನೇಯ ಗು ರಾಗಿಗುಡ್ಡ, ರಾಜಾಜಿನಗರ ರಾಮಮಂದಿ ಬುಲ್‌ಟೆಂಪಲ್ ರಸ್ತೆ ದೊಡ್ಡ ಗಣಪತಿ ದೇವಸ್ಥಾ ಮುಂತಾದ ಕಡೆಗಳಲ್ಲೆಲ್ಲ ಈಗಲೂ ಗಣೇಶ ಉತ್ಸ ನಡೆಯುತ್ತದೆ. ಬೆಂಗಳೂರಲ್ಲದೆ ಮೈಸೂರ ತುಮಕೂರು, ಹಾಸನ, ಚಿಕ್ಕಮಗಳೂರ ಕುಣಿಗಲ್, ಅರಸೀಕೆರೆ, ಹೊಸಕೋಟೆ ಮುಂತಾ ಕಡೆ ಸೇರಿ 15–20 ಪ್ರದರ್ಶನಗಳನ್ನು ಈಗಲ ನಾವು ನೀಡುತ್ತಿದ್ದೇವೆ. ಜನ ಕಾದು ನಿಂತು ನಾಟ ಆಸ್ವಾದಿಸುತ್ತಾರೆ. ಭಾರೀ ಸಂಖ್ಯೆಯಲ್ಲಿ, ಎಲ್ಲೆಲ್ಲೂ ನಿಂತು, ಕೂತು ನಾಟಕ ನೋಡುತ್ತಾರೆ. ಮ ಒಳಗೇ ಮೇಕಪ್ ಮಾಡಲು ವ್ಯವಸ್ಥೆಗಳನ್ನು ಮಾಡಿಕೊಡುತ್ತಾರೆ. ರಂಗಭೂಮಿ ನಟರು-ತ ಥಿಯೇಟರುಗಳಿಗೆ ಬರಲಿ ಎಂದು ಕಾಯು ಬದಲು ಇಂತಹ ಕಡೆಗಳಿಗೆ ಹೋಗುವುದೇ ಹೆ ಸೂಕ್ತ, ಅಂತ ನಮಗಂತೂ ಅನ್ನಿಸಿದೆ ಎಂಬುದಾಗಿ ಹಿರಣ್ಣಯ್ಯ ಹೇಳುತ್ತಾರೆ.

ಗಣೇಶ ಉತ್ಸವ ಫ್ಯಾಷನ್ ಆಗುತ್ತಿರುವುದು ನಿಜ. ಆದರೆ ಅದರ ಅರ್ಥ ಸಾಂಸ್ಕೃತಿ ಕಾರ್ಯಕ್ರಮಗಳತ್ತ ಜನರ ಆಸಕ್ತಿ ಕುಗ್ಗುತ್ತಿ ಎಂದಲ್ಲ. ನೋಡಿ 33 ವರ್ಷಗಳಿಂದ ಗಣೇಶೋತ್ಸ ಮಾಡುತ್ತಿದ್ದೇವೆ. ಪೂರ್ತಿ ಸಾಂಸ್ಕೃತಿ ಕಾರ್ಯಕ್ರಮಗಳನ್ನೇ ಹಮ್ಮಿಕೊಳ್ಳುತ್ತಿದ್ದೇವೆ. ಆದ ಎಂದೂ ನಮ್ಮ ಕಾರ್ಯಕ್ರಮಗಳಿಗೆ ಜ ಕಮ್ಮಿಯಾಗಿಲ್ಲ ಎನ್ನುತ್ತಾರೆ ಬಸವನಗುಡಿ ದೊಡ ಗಣಪತಿ ದೇವಸ್ಥಾನದ ವಿದ್ಯಾಗಣಪತಿ ಸೇವ ಸಮಿತಿಯ ಕಾರ್ಯದರ್ಶಿ ಪ್ರಕಾಶ್ ಮತ ದೇವಸ್ಥಾನದಲ್ಲಿ 48 ವರ್ಷಗಳಿಂದ ಪ್ರಧಾ ಅರ್ಚಕರಾಗಿರುವ ಗುರುರಾಜ್.

**ಉತ್ತರ ಕರ್ನಾಟಕದಲ್ಲಿ:** ಉತ್ತರ ಕರ್ನಾಟಕದ ಅದರಲ್ಲೂ ವಿಶೇಷವಾಗಿ ಹುಬ್ಬಳ್ಳಿ – ಧಾರವಾಡ

# ಹುಬ್ಬಳ್ಳಿಯ 'ಬೆಳ್ಳಿ ಗಣಪ'

ಗಣೇಶ ಹಬ್ಬ ಬಂದೊಡನೆ ಎಲ್ಲ ಕಡೆಗಳಲ್ಲಿ ಮಣ್ಣಿನ ಗಣಪನ ವಿಗ್ರಹಗಳನ್ನು ತಂದಿಟ್ಟು ಪೂಜೆ ಮಾಡುವುದು ಸಂಪ್ರದಾಯ. ಆದರೆ ಹುಬ್ಬಳ್ಳಿಯ ಶೀಲವಂತರ ಓಣಿಯಲ್ಲಿ 'ಮಣ್ಣಿನ ಗಣಪ'ನಿಗೆ ಬದಲಾಗಿ 'ಬೆಳ್ಳಿ ಗಣಪ'ನಿಗೆ ಪೂಜೆ ನೆರವೇರಿಸಿ ಉತ್ಸವ ಆಚರಿಸುತ್ತಾರೆ..!

ಹುಬ್ಬಳ್ಳಿ ಶೀಲವಂತರ ಓಣಿಯ ಗಜಾನನ ಉತ್ಸವ ಮಂಡಲ ಸುಮಾರು ಎರಡು ದಶಕಗಳಿಂದ ಗಣೇಶ ಉತ್ಸವ ಆಚರಿಸುತ್ತಿದ್ದು ಇಪ್ಪತ್ತನೇ ವರ್ಷದ ನೆನಪಿಗಾಗಿ 'ಬೆಳ್ಳಿ ಗಣಪ'ನನ್ನು ನಿರ್ಮಿಸಿ ಕೊಡಿಸುವ ಯೋಜನೆ ಮಾಡಿತು. ಉತ್ಸಾಹಿಗಳು ತಕ್ಷಣ ಕಾರ್ಯಪ್ರವೃತ್ತರಾದ ಪರಿಣಾಮವಾಗಿ ಕಳೆದ ವರ್ಷ 'ಬೆಳ್ಳಿ ಗಣಪ' ನಿರ್ಮಾಣವಾಗಿಯೇ ಬಿಟ್ಟ.

ಸುಮಾರು ಎರಡು ಅಡಿ ಎತ್ತರದ 26.5 ಕಿಲೋ ಗ್ರಾಂ ತೂಕದ ಈ 'ಬೆಳ್ಳಿ ಗಣಪ' ನಿರ್ಮಾಣಕ್ಕೆ ಆದ ವೆಚ್ಚ 2.5 ಲಕ್ಷ ರೂ. ಹಣವನ್ನು ಆಸುಪಾಸಿನ ಮಂದಿ, ವ್ಯಾಪಾರಿಗಳು, ಭಕ್ತರು ದೇಣಿಗೆ ಮೂಲಕ ಭರಿಸಿದರು. ನಿಪ್ಪಾಣಿಯ ಅಪ್ಪಾಸಾಹೇಬ ಕಾಡಾಪುರಕರ ನಿರ್ಮಿಸಿಕೊಟ್ಟ ಈ ಮೂರ್ತಿಗೆ ರಾಜಸ್ಥಾನದ ಭಕ್ತರು ಸುಂದರವಾದ ಕಾಯಂ ಮಂಟಪವನ್ನೂ ನಿರ್ಮಿಸಿಕೊಟ್ಟಿದ್ದಾರೆ.

ಗಣೇಶ ಉತ್ಸವದ ಸಂದರ್ಭದಲ್ಲಿ 11 ದಿನಗಳ ಕಾಲ ಮಂಟಪದಲ್ಲಿ ಇಟ್ಟು ಸಾರ್ವಜನಿಕವಾಗಿ ಪೂಜೆಗೊಳ್ಳುವ ಈ ಗಣೇಶನಿಗೆ ಗಣೇಶ ಉತ್ಸವದ ನಂತರ 'ವಿಸರ್ಜನೆ'ಯ ಬದಲು ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ 'ಸೇಫ್‌ಲಾಕರ್' ವಾಸ. ಆದರೆ ಬ್ಯಾಂಕಿನಲ್ಲಿರುವಾಗಲೂ ನಿತ್ಯ ಪೂಜೆಗೆ ವ್ಯವಸ್ಥೆ ಮಾಡಲಾಗಿದೆ ಎನ್ನುತ್ತಾರೆ ಗಜಾನನ ಮಂಡಲದ ಎಂ.ಎಂ. ಗದಗ.

ಉತ್ಸವದ ನಂತರ ಗಣೇಶ ವಿಸರ್ಜನೆಯ ಪರಿಪಾಠ ಪಾಲನೆ ಸಲುವಾಗಿ ಉತ್ಸವ ಕಾಲದಲ್ಲೇ 'ಬೆಳ್ಳಿ ಗಣಪನ' ಬಳಿ ಇರಿಸಲಾಗುವ ಪುಟ್ಟ ಮಣ್ಣಿನ ಗಣಪನನ್ನು ಕಡೆಯ ದಿನ ಮೆರವಣಿಗೆಯಲ್ಲಿ ಒಯ್ದು ವಿಸರ್ಜನೆ ಮಾಡಲಾಗುತ್ತದೆ. ಬೆಳ್ಳಿ ಗಣಪನ ಸಂರಕ್ಷಣೆಗಾಗಿ ಟ್ರಸ್ಟ್ ಒಂದನ್ನೂ ರಚಿಸಲಾಗಿದೆ ಎನ್ನುತ್ತಾರೆ ಸಾರ್ವಜನಿಕ ಗಣೇಶೋತ್ಸವ ಸಮಿತಿಗಳ ಮಹಾಮಂಡಳದ ಅಧ್ಯಕ್ಷ ಕಮಡೊಳ್ಳಿ ಶೆಟ್ಟರ. ಹೀಗಾಗಿ ಇಲ್ಲಿ 'ಬೆಳ್ಳಿ ಗಣಪ' ಕಾಯಂ 'ಉತ್ಸವ ಮೂರ್ತಿ'.



ಹುಬ್ಬಳ್ಳಿ ಶೀಲವಂತರ ಓಣಿಯಲ್ಲಿ ಸಾರ್ವಜನಿಕ ಗಣೇಶ ಉತ್ಸವದಲ್ಲಿ ಪೂಜೆಗೊಳ್ಳುವ ಬೆಳ್ಳಿ ಗಣಪ...

ಬೆಳಗಾವಿ ಮುಂತಾದ ಕಡೆಗಳಲ್ಲಿ ಗಣೇಶ ಉತ್ಸವ ದಕ್ಷಿಣದ ದಸರಾ ಉತ್ಸವಕ್ಕಿಂತಲೂ ದೊಡ್ಡ ಉತ್ಸವ. ಇಲ್ಲಿ ಜನರಿಗೆ ವೈವಿಧ್ಯಮಯ ವೇಷ ತಾಳುವ ಗಣಪನ ವಿಗ್ರಹಗಳ ಜೊತೆಗೆ 'ಸಿನಿಮಾ ಸೆಟ್ಟಿಂಗ್'ಗಳನ್ನು ಕೂಡಾ ಮೀರಿಸುವಂತಹ ಗಣೇಶ ಮಂಟಪಗಳು ಹೆಚ್ಚಿನ ಆಕರ್ಷಣೆ.

ಹುಬ್ಬಳ್ಳಿಯಲ್ಲಿ ಗಣೇಶ ಉತ್ಸವದ ಪೆಂಡಾಲುಗಳ ನಿರ್ಮಾಣಕ್ಕೆ ಸ್ಥಳೀಯ ಕಲಾವಿದರಲ್ಲದೆ ಚೆನ್ನೈ, ಕಲ್ಕತ್ತದಂತಹ ಕಡೆಗಳಿಂದಲೂ ಕಲಾವಿದರು ಆಗಮಿಸುತ್ತಾರೆ. ಕೆಲವು ಪೆಂಡಾಲುಗಳಿಗೆ ಲಕ್ಷಾಂತರ ರೂಪಾಯಿ ವೆಚ್ಚವಾಗುವುದೂ ಇದೆ. ಗಣೇಶನ ಹಬ್ಬ ಬಂದೊಡನೆಯೇ ಇಲ್ಲಿನ ಗಲ್ಲಿಗಳಲ್ಲಿ ಜೈಪುರದ ಅರಮನೆಯಿಂದ ಹಿಡಿದು 'ಕಾರ್ಗಿಲ್ ಸಮರಭೂಮಿ', 'ಹಾರುವ ತಟ್ಟೆ' ಇತ್ಯಾದಿಗಳೆಲ್ಲ ಪ್ರತ್ಯಕ್ಷವಾಗುತ್ತವೆ. ಬೃಹತ್ ಗಾತ್ರದ ತೆಂಗಿನಕಾಯಿ ಗಣಪ, ಶಿರಡಿ ಸಾಯಿಬಾಬಾ ಆಕಾರದ ಮಂಟಪ ಬರುವುದೂ ಇದೆ.

ಇವೆಲ್ಲ ಹೊರನೋಟಕ್ಕೆ ಕಾಣುವ ಪೆಂಡಾಲ್ ದೃಶ್ಯಗಳು. ಅವುಗಳ ಒಳ ಹೊಕ್ಕರೆ ಮಣ್ಣಿನ ಪುಟ್ಟ



ಗಣಪನ ಜೊತೆಗೆ ವೈವಿಧ್ಯಮಯ ರೂಪ ತಳೆದ ಗಣಪನ ದೊಡ್ಡ ವಿಗ್ರಹಗಳು. ಇಲ್ಲವೇ 15–20 ನಿಮಿಷಗಳ ಅದ್ಭುತ ಲೋಕಕ್ಕೆ ಒಯ್ಯುವ 'ಚಲಿಸುವ ರೂಪಕಗಳು' ನಿಮ್ಮನ್ನು ನಿಬ್ಬೆರಗಾಗಿಸುತ್ತವೆ.

ಇವುಗಳನ್ನು ನೋಡಲೆಂದೇ ಲಕ್ಷಾಂತರ ಮಂದಿ ಆಸುಪಾಸಿನ ಹಳ್ಳಿ– ಊರುಗಳಿಂದ ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತಿತರ ನಗರಗಳಿಗೆ ಆಗಮಿಸುತ್ತಾರೆ. ರಾತ್ರಿಯಿಡೀ ಅಲ್ಲೇ ಕಳೆದು ನಸುಕಿನ ವೇಳೆಗೆ ತಮ್ಮ ಹಳ್ಳಿಗಳಿಗೆ ಮರು ಪ್ರಯಾಣ ಮಾಡುತ್ತಾರೆ. ಒಂದು ಶತಮಾನಕ್ಕೂ ಹೆಚ್ಚು ಕಾಲದಿಂದ ಹುಬ್ಬಳ್ಳಿಯಲ್ಲಿ ಗಣೇಶ ಉತ್ಸವ ಆಚರಿಸುತ್ತಿರುವ ರೈಲ್ವೇ ಗಣೇಶೋತ್ಸವ ಮಂಡಲದಂತಹ ಗಣೇಶ ಉತ್ಸವ ಸಮಿತಿಗಳು ದಕ್ಷಿಣ ಕರ್ನಾಟಕದಂತೆ ಇಲ್ಲೂ ಗಂಗೂಬಾಯಿ ಹಾನಗಲ್ಲ, ಭೀಮಸೇನ ಜೋಶಿ, ಗದುಗಿನ ಗವಾಯಿಗಳಂತಹ ಖ್ಯಾತರ ಸಂಗೀತ ಕಚೇರಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಸಂಘಟಿಸುತ್ತವೆ.

ದಕ್ಷಿಣ ಕರ್ನಾಟಕದಲ್ಲಿ ಗಣೇಶೋತ್ಸವ ಸಂದರ್ಭದಲ್ಲಿ 'ನಾದೋಪಾಸನೆ'ಯ ಮಹತ್ವ ತಗ್ಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ಮೂಲೆಗುಂಪಾಗುತ್ತಿರುವ ಭಯ ಕಾಡುತ್ತಿರುವಂತೆಯೇ ಉತ್ತರ ಕರ್ನಾಟಕದಲ್ಲೂ ಗಣೇಶೋತ್ಸವದ ಸಾಂಸ್ಕೃತಿಕ ಮಹತ್ವ ಕುಗ್ಗುತ್ತಿರುವ ಶಂಕೆ ಈಚೆಗೆ ವ್ಯಾಪಕವಾಗುತ್ತಿದೆ. ಗಣೇಶನ ಮೂರ್ತಿಗಳನ್ನು ಇಟ್ಟು ಸಿನಿಮಾ ಹಾಡುಗಳನ್ನೋ, ಡಿಸ್ಕೊ ಸಂಗೀತವನ್ನೋ ಹಾಕುವ, ಚಂದಾ ವಸೂಲಿಯ ಪರಿಪಾಠ ಹೆಚ್ಚುತ್ತಿದೆ.

ಗಣೇಶ ಉತ್ಸವದ ಸಾಂಸ್ಕೃತಿಕ ಪರಂಪರೆಯನ್ನು ಕಾಯ್ದುಕೊಳ್ಳಬೇಕು. ಉತ್ತರ ಕರ್ನಾಟಕದ ಗಣೇಶ ಉತ್ಸವವನ್ನು ಮೈಸೂರಿನ 'ದಸರಾ ಉತ್ಸವ'ಕ್ಕೆ ಸರಿಸಮನಾದ ಮಟ್ಟದಲ್ಲಿ ನಿಲ್ಲಿಸಬೇಕು ಎಂಬ ಆಶಯದೊಂದಿಗೆ ಹುಬ್ಬಳ್ಳಿಯಲ್ಲಿ ಕಮಡೊಳ್ಳಿ ಶೆಟ್ಟರ ನೇತೃತ್ವದಲ್ಲಿ ಹುಬ್ಬಳ್ಳಿಯ ಸಾರ್ವಜನಿಕ ಗಣೇಶೋತ್ಸವ ಸಮಿತಿಗಳ ಮಹಾಮಂಡಳ ಸುಮಾರು 26 ವರ್ಷಗಳಷ್ಟು ಹಿಂದೆಯೇ ಜನ್ಮತಾಳಿ ಕಾರ್ಯಾಚರಣೆ ನಡೆಸುತ್ತಿದೆ. ಸುಮಾರು 200ಕ್ಕೂ ಹೆಚ್ಚು ಗಣೇಶ ಉತ್ಸವ ಸಮಿತಿಗಳನ್ನು ಒಂದೇ ಸೂತ್ರದಲ್ಲಿ ಪೋಣಿಸಿ ಉತ್ತಮ ಅಲಂಕಾರ, ಉತ್ತಮ ಕಾರ್ಯಕ್ರಮ, ಉತ್ತಮ ವಿಗ್ರಹ, ಕಲಾವಿದರಿಗೆ ಬಹುಮಾನ ನೀಡುವ ಪರಂಪರೆ ಮುನ್ನಡೆಸಿಕೊಂಡು ಬಂದಿದೆ.

ಹಿಂದಿನಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಪರಂಪರೆಯನ್ನು ಉಳಿಸಿಕೊಳ್ಳಬೇಕೆಂಬ ಹಿರಿಯರ ಆಶಯ. ಇನ್ನೊಂದೆಡೆ ಯುವ ಜನಾಂಗ 'ಫ್ಯಾಷನ್ ಯುಗದ' ಆಕರ್ಷಣೆಗಳ ಮಧ್ಯೆ ಗಣೇಶ ಉತ್ಸವ ಹೊಯ್ದಾಡುತ್ತಿದೆ. ಯಾವುದರ ಪ್ರಭಾವ ಹೆಚ್ಚುವುದೋ ಎಂಬ ಪ್ರಶ್ನೆಗೆ ಕಾಲವೇ ಉತ್ತರಿಸಬೇಕಲ್ಲವೇ? ಅದೋ ಮತ್ತೆ ಗಣೇಶ ಚತುರ್ಥಿ ಬಂದಿದೆ. 'ಗಣೇಶ ಬಂದ, ಬಂದ ಗಣೇಶ..' ಎಂಬ ಹರ್ಷದ ನಡುವೆ 'ಗಣಪತಿ ಬಪ್ಪಾ ಮೋರಯಾ..' ಘೋಷಣೆಗಳು ಗಗನಕ್ಕೆ ಏರಲಿವೆ. ಗಣೇಶನ ಮುಂದಿನ ಹಾದಿ ಯಾವುದೋ ಏನೋ? ಕಾಲಾಯ ತಸ್ಮೈ ನಮಃ

ಮುಖಪುಟ ಚಿತ್ರ: ಉಮಾ ಅವರ

ಕೊಲ್ಲೂರಿ ಕಲಾಕೃತಿ: ಉಳಿದ ಚಿತ್ರಗಳು: ಎಸ್.ಪರೀಕ್

# ಸಲ್ಲದ ನಡವಳಿಕೆ ಮತ್ತು ಮಾದರಿ ಉತ್ಸವ

'ಗಣೇಶ ಉತ್ಸವಕ್ಕೆ ಚಂದಾ ಕೊಡಿಸಿದ ನಾಲ್ವರು ಬಾಲಕರು ನಾಪತ್ತೆ'. ಇದು ತೀರಾ ಇತ್ತೀಚೆಗೆ ಪತ್ರಿಕೆಗಳಲ್ಲಿ ಪ್ರಕಟವಾದ ಒಂದು ವರದಿ. ಬೆಂಗಳೂರಿನಲ್ಲಿ ಗಣೇಶನನ್ನು ಕೂರಿಸುವುದಾಗಿ ಹೇಳಿ ಸುಮಾರು 20,000 ರೂಪಾಯಿ ಚಂದಾ ವಸೂಲು ಮಾಡಿದ್ದ ಕೆಲವು ಹುಡುಗರು ಏಕಾಏಕಿ ಕಣ್ಮರೆಯಾಗಿ ಬಿಟ್ಟಿದ್ದಾರೆ.

ಗಣೇಶ ಹಬ್ಬದ ಹರ್ಷದ ಜೊತೆಗೆ ಸಾರ್ವಜನಿಕರು, ಸರ್ಕಾರ ಹೆಚ್ಚು ಗಮನ ಹರಿಸಬೇಕಾದ ಆತಂಕಕಾರಿಯಾದ ವಿದ್ಯಮಾನ ಇದು. ಗಣೇಶ ಉತ್ಸವ ಬರುತ್ತಿದ್ದ ಹಾಗೆಯೇ ಬೀದಿ ಬೀದಿಗಳಲ್ಲಿ ಹುಡುಗರು 'ಗೋಲಕ' ಹಿಡಿದುಕೊಂಡು ಚಂದಾ ವಸೂಲಿ ಮಾಡುವ ಪರಿಪಾಠ ಹೆಚ್ಚುತ್ತಿದೆ.

ಈ ರೀತಿ ಕೂಡಿಸಿದ ಚಂದಾ ಹಣ ಯಾವುದಕ್ಕೆ ಬಳಕೆಯಾಗುತ್ತದೆ ಎಂಬುದಾಗಿ ಗಮನಿಸುವವರಿಲ್ಲ. ಕೆಲವು ಕಡೆ ಪಡ್ಡೆ ಹುಡುಗರು ಚಂದಾ ವಸೂಲಿ ಮಾಡಿ ಹೆಸರಿಗಷ್ಟೇ ಮಂಟಪದಲ್ಲಿ ಗಣೇಶನನ್ನು ಕೂರಿಸಿ ಯಾವುದೇ ಕಾರ್ಯಕ್ರಮವನ್ನೂ ಮಾಡದೆ ವಿಸರ್ಜಿಸುತ್ತಾರೆ. ದಾರಿಹೋಕರು, ವಾಹನ ಸವಾರರನ್ನು ಕಾಡಿ, ಬೇಡಿ ಇಲ್ಲವೇ ಬೆದರಿಕೆ ಹಾಕಿ ವಸೂಲು ಮಾಡಿದ ಹಣ ನಂತರ 'ಮಜಾ ಉಡಾಯಿಸಲು' ವೆಚ್ಚವಾಗುತ್ತದೆ.

ಇಂತಹ ಕೆಟ್ಟ ಚಾಳಿ ಹಬ್ಬದಂತೆ ನೋಡಿಕೊಳ್ಳಬೇಕಾದ ಹೊಣೆ ಸಮಾಜ, ಸರ್ಕಾರದ ಮೇಲೆ ಇದೆ. ಹೆಚ್ಚುತ್ತಿರುವ ಇಂತಹ ಗಣೇಶ ಉತ್ಸವಗಳ ನಂತರ ಗಣೇಶ ವಿಗ್ರಹಗಳ ವಿಸರ್ಜನೆ ಕೂಡಾ ದೊಡ್ಡ ಸಮಸ್ಯೆಯಾಗುತ್ತಿದೆ. ಗಣೇಶ ವಿಸರ್ಜನೆಗೆ ಎಲ್ಲೋ ಒಂದೆಡೆ ವ್ಯವಸ್ಥೆ ಮಾಡಿದ್ದರೂ, ಅಲ್ಲಿವರೆಗೆ ಹೋಗದೆ ಸಿಕ್ಕ ಸಿಕ್ಕ ಕಡೆ ನೀರು ಇರಲೀ ಬಿಡಲೀ ಯಾವುದೋ ಒಂದು ಕೆರೆ ಕುಂಟೆ ಬಾವಿಯಲ್ಲಿ ಗಣಪನನ್ನು ವಿಸರ್ಜಿಸಿಬಿಡುತ್ತಾರೆ. ಇದರಿಂದ ಹೂಳು ತುಂಬಿಕೊಂಡು ಜಲಮಾಲಿನ್ಯ ಹಾಗೂ ಪರಿಸರ ಮಾಲಿನ್ಯ ಉಂಟಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ.

ಅರಸೀಕೆರೆಯಲ್ಲಿ ಕೆಲ ವರ್ಷಗಳ ಹಿಂದಿನಿಂದಲೇ ಮಾದರಿಯಾದ ಗಣೇಶ ಉತ್ಸವದ ಪರಿಪಾಠವಿದೆ. ಇಲ್ಲಿ ಇಡೀ ಊರ ಮಂದಿ ಒಟ್ಟಾಗಿ ಒಂದೇ ಕಡೆ ಗಣಪನನ್ನು ಕೂರಿಸುತ್ತಾರೆ. ಒಟ್ಟಾಗಿ ಸಂಭ್ರಮದಿಂದ ಗಣೇಶ ಉತ್ಸವ ಆಚರಿಸುತ್ತಾರೆ. ನಂತರ ಸಂಭ್ರಮೋತ್ಸಾಹದ ಮೆರವಣಿಗೆಯಲ್ಲಿ ಒಟ್ಟಾಗಿ ಸಾಗಿ ಗಣೇಶನನ್ನು ವಿಸರ್ಜಿಸುತ್ತಾರೆ.

ಇಡೀ ಊರು, ಕೇರಿಗಳ ಮಂದಿ ಒಟ್ಟಾಗಿ ಈ ರೀತಿ ಸೇರಿ ಗಣೇಶ ಉತ್ಸವ ಆಚರಿಸುವ ಪರಂಪರೆ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ವಿಟ್ಲ, ಬಂಟ್ವಾಳ, ಬಿ.ಸಿ. ರೋಡು ಮುಂತಾದ ಹಲವಾರು ಕಡೆಗಳಲ್ಲೂ ಇದೆ. ಎಲ್ಲರೂ ಕೂಡಿ ಒಂದೇ ಕಡೆ ಸಂಭ್ರಮದಿಂದ ಆಚರಿಸುವ ಇಂತಹ 'ಮಾದರಿ ಗಣೇಶೋತ್ಸವ'ಗಳನ್ನು ಇತರರೂ ಅನುಕರಿಸಬೇಕಾದ ಅಗತ್ಯವಿದೆ.



# ನಾದ-ರಾಗ ರೂಪಿ ಗಣೇಶ

ವಿಘ್ನನಿವಾರಕ ವಿನಾಯಕನು ಪ್ರತಿವರ್ಷ ಭಾದ್ರಪದ ಚೌತಿಯಂದು ಪ್ರತಿ ಮನೆ ಬಾಗಿಲಿಗೆ ವಿವಿಧ ರೂಪ ತಾಳಿ ಬರುತ್ತಾನೆ. ಈ ಗಣಪ, ಕಷ್ಟಕಾರ್ಪಣ್ಯಗಳನ್ನು ಪರಿಹರಿಸುವ ಸಂಕಷ್ಟಹರನಾಗಿ ಕೆಲವರಿಗೆ ಕಂಡರೆ, ಇನ್ನು ಹಲವರಿಗೆ ದುಷ್ಟರಿಗೆ ಶಿಕ್ಷೆ ನೀಡುವ ವಿಘ್ನರಾಜ. ಮಣ್ಣಿನಲ್ಲಿ ರೂಪ ಪಡೆದು ಸರ್ವರಿಂದ ಪೂಜಿತಗೊಂಡು ನೀರಿನಲ್ಲಿ ಕರಗಿ ಮತ್ತೆ ಮಣ್ಣಾಗಿ ಪುನರ್ಜನ್ಮ ಪಡೆಯುತ್ತಲೇ ಬರುವ ಗಣನಾಯಕನ ರೂಪ ವೈವಿಧ್ಯ ಹಲವು ಬಗೆ.

ಆನೆಯ ನೀಳವಾದ ಸೊಂಡಿಲನ್ನು ಹೊಂದಿರುವ ಈತನ ರೂಪ ಕಲಾವಿದರಿಗೆ ಸ್ಫೂರ್ತಿ. ಗಣನಾಯಕನನ್ನು ಹಲವು ರೂಪಗಳಲ್ಲಿ ಚಿತ್ರಿಸುವುದು ಕಲಾವಿದರ ಅಭಿಲಾಷೆಗೆ ಸ್ಫೂರ್ತಿ ಆತನ ಮುಖಾರವಿಂದ. ಅದಕ್ಕೆಂದೇ ಈ ಬಾರಿ ಗಣೇಶನಿಗೆ ನಾದಗಳ, ರಾಗಗಳ ರೂಪ.

ಗಣೇಶನ ಕಲ್ಪನೆ ಸಾವಿರಾರು ವರ್ಷಗಳಷ್ಟು ಹಳೆಯದು. ಚಕ್ರವರ್ತಿಗಳನ್ನು ಬಗೆಯಲ್ಲಿ ಮೂಷಿಕದಿಂದ ಗಣದ ಹಲವಾರು ವರ್ಷಗಳಿಂದಲೂ ಕಲಾವಿದರಿಗೆ ವಸ್ತುವಾಗಿದ್ದಾನೆ. ಸಂಗೀತದೊಂದಿಗಿನ ಗಣೇಶನ ಸಂಬಂಧ ಹೊಸತಲ್ಲವಾದರೂ ಆದರ ವೈವಿಧ್ಯ ಬೆರಗುಗೊಳಿಸುವಂತಹುದು.

ಈತನ ರೂಪ ವೈವಿಧ್ಯ ಆವರವರ ಭಾವಕ್ಕೆ ತಕ್ಕಂತೆ ಅರಳಿ ನಿಲ್ಲುವುದು. ನಾದ ರಾಗ ರೂಪಗಳಲ್ಲಿ ಬಣ್ಣಗಳ ಮೇಳದಲ್ಲಿ ಗಣೇಶ ಮೃದಂಗದ ಜೊತೆಗೂಡುವುದೇ ಕುತೂಹಲದ ಇಲ್ಲಿನ ಚಿತ್ರಗಳು...

ಕಲಾವಿದ ಜಿ.ಎಂ. ಹೆಗಡೆ ಅವರ ಕಲ್ಪನೆಯ ಮೂಸೆಯಲ್ಲಿ ಅರಳಿದ ಈ ಕಲಾಕೃತಿಗಳು ಎಂಥವರನ್ನೂ ತನ್ನೆಡೆಗೆ ಸೆಳೆಯುತ್ತವೆ.

ಗಣೇಶ ನಾದಸ್ವರೂಪಿ ಎಂದೇ ವಿಘ್ನ ನಾದೋಪಾಸಕರ ಅನಿಸಿಕೆ. ಮುರಳಿಯ ನಾದ. ಢಕ್ಕೆಯ ನಿನಾದ. ಡಿಂಡಿಮ ಸ್ವರ. ತಾಳ ಮೃದಂಗಗಳೊಂದಿಗೆ ನೃತ್ಯಗಾನಪ್ರಿಯನಾಗಿ ಮೆರೆವ ಈತನ ಚಿತ್ರ ಮನೋಹರವಾದವು. ನಾದಗಳನ್ನು ಹದಗೊಳಿಸುವ ಅಧಿದೇವತೆ ವಿನಾಯಕ ಸಂಗೀತ ಸಾಧಕರ ನಂಬಿಕೆ.

ಹತ್ತಾರು ಹೆಸರುಗಳಿಂದ ಆರಾಧಿಸಲ್ಪಡುವ ಈ ಪಾರ್ವತಿಸುತ ಇವರ ಚಿತ್ರಗಳಲ್ಲಿ ತಾಳ ರಾಗಗಳೊಂದಿಗೆ ಒಡನಾಡಿದ್ದಾನೆ. ಗಣೇಶ ಕೊಳಲು ನುಡಿಸುತ್ತ, ವಾಲಗ ಊದುತ್ತ, ತಬಲಾ, ಮೃದಂಗ, ಪಿಯಾನೊ ಬಾರಿಸುತ್ತ....

ಕಲಾವಿದರ ಕಲ್ಪನೆಯಲ್ಲಿ ಅರಳಿದ್ದಾನೆ.

ಒಂದೆಡೆ ಉದರಕ್ಕೆ ನಾಗನನ್ನು ಬಿಗಿದು ತಬಲಾ ಢಕ್ಕೆಯ ಮೇಲೆ ಬೆರಳನ್ನು ಆಡಿಸುತ್ತಾನೆ. ಮತ್ತೊಂದೆಡೆ ಮುರಳಿಯನ್ನು ನುಡಿಸುತ್ತ ತನ್ಮಯನಾಗಿ ನೀಲವರ್ಣದ ಆವರಣದಲ್ಲಿಯೂ ಮಿಂಚುತ್ತಿದ್ದಾನೆ. ಹೀಗೆ ಸಂಗೀತದ ರಾಗಮಾಲಿಕೆಯಲ್ಲಿ ಕಾಣಬರುವ ಇವರ ಚಿತ್ರಗಳಲ್ಲಿನ ರೂಪ ವೈವಿಧ್ಯಗಳು ಕಲಾಪ್ರೇಮಿಗಳ ಮನಸ್ಸನ್ನು ಸೂರೆಗೊಳ್ಳುತ್ತವೆ.



